# ಸರಕಾರಿ ಉರ್ದು ಪ್ರೌಢ ಶಾಲೆ(RMSA) ಅಣ್ಣಿಗೇರಿ

## ಮಾದರಿ ಪ್ರಶ್ನೆ ಪತ್ರಿಕೆ–02

**ತರಗತಿ : 10ನೇ** **ವಿಷಯ : ದ್ವಿತೀಯ ಭಾಷೆ ಕನ್ನಡ**

**ಅಂಕಗಳು : 80** **ಸಮಯ : 3 ಗಂಟೆ**

---

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ** **(1X4=4)**

1 ಹಿಂಡುಗಟ್ಟಿ ಪದವು ಈ ಸಮಾಸಕ್ಕೆ ಉದಾಹರಣೆ:

ಎ) ದ್ವಿಗು ಸಮಾಸ ಬಿ) ಕರ್ಮಧಾರೆಯ ಸಮಾಸ ಸಿ) ಅಂಶಿ ಸಮಾಸ ಡಿ) ಕ್ರಿಯಾ ಸಮಾಸ

2 ಕರಕರ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:

ಎ)ಅನುಕರಣಾವ್ಯಯ ಬಿ)ಜೋಡುನುಡಿ ಸಿ)ನುಡಿಗಟ್ಟು ಡಿ)ದ್ವಿರುಕ್ತಿ

3 ಚಂದ್ರೋದಯ ಪದವು ಈ ಸಂಧಿಗೆ ಉದಾಹರಣೆ:

ಎ)ಲೋಪಸಂಧಿ ಬಿ)ಆಗಮಸಂಧಿ ಸಿ)ಸವರ್ಣದೀರ್ಘಸಂಧಿ ಡಿ)ಗುಣಸಂಧಿ

4 ಫಾತೀಮಾ ಹಾಲನ್ನು ಕುಡಿಯುತ್ತಿದ್ದಾಳೆ ಪದವು ಈ ಕಾಲದಲ್ಲಿದೆ:

ಎ)ಭೂತಕಾಲ ಬಿ)ವರ್ತಮಾನ ಕಾಲ ಸಿ)ಭವಿಷತ್ ಕಾಲ ಡಿ)ನಿಷೇಧಾರ್ಥಕ ಕಾಲ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **(1X12=12)**

5 ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?

6 ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?

7 ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವವು?

8 ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

9 ಮೇಲೇರಿದವರು ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

10 ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

11 ಲಂಡನ್‌ನ ಭೂ ವಿಸ್ತೀರ್ಣ ಎಷ್ಟು?

12 ನಾಟಕದ ನಾಲ್ಕು ಅಂಗಗಳಾವುವು?

13 ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?

14 ದೇಶದ ಸಂರಕ್ಷಣೆ ಯಾರಿಂದ ಸಾಧ್ಯವಾಗುತ್ತದೆ?

15 ಕೆರೆಯಲ್ಲಿ ಯಾವ ಮೀನುಗಳಿದ್ದವು?

16 ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ?

SHARANUSH

**III ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ. (8X2=16)**

17 ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?

18 ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?

19 ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?

20 ಬೇಡನು ಪ್ರಾಣಿಗಳನ್ನು ಹೇಗೆ ಕೊಲ್ಲುತ್ತಿದ್ದನು?

21 ಹೆಡ್ ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು?

22 ಬದುಕ ಬದುವ ಬೇಲಿಯಲ್ಲಿ ಏನೇನು ಇದೆ?

23 ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?

24 ಕಳ್ಳರ ಗುರು ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು?

**IV ಈ ಕೆಳಗಿನ ಸಾಹಿತಿಯ ಜನನ,ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (1X3=3)**

25 ಕುಮಾರವ್ಯಾಸ

**V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ (1X3=3)**

26 ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ
ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು
ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು
ಸಿಡುಕು ಮಿಡುಕನು ತೊರೆದು ಮೌನಿಯಾಗು

**VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ. (1X3=3)**

27 ಸಾವಿರಾರು ಮಳೆ ಬಿಲ್ಲುಗಳು ಸೇರಿ ಕುಣಿದಂತೆ ಕಾಣಿಸಿತು

**VII ಗಾದೆ ವಿಸ್ತರಿಸಿ ಬರೆಯಿರಿ (1X3=3)**

28 ಪೆನ್ನು ಖಡ್ಗಕ್ಕಿಂತ ಹರಿತ

**ಅಥವಾ**

ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ

SHARANUSH

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ. (5X3=15)**

29 ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು

30 ಅವನು ಬಂದರೆ ಕರೆದುಕೊಂಡು ಹೋಗು ತಾಯಿ

31 ಆ ಮಗುವಿಗೆ ಬಡತನದ ಬವಣೆಯೇಕೆ

32 ಕಬ್ಬಕ್ಕಿ ಬಾಯ ಬಿಡುತಾವೆ

33 ನೆಲ ಮುಗಿಲ ವಾಲಗವೆ ನಡೆದಂತಿದೆ

**IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (1X4=4)**

34 ನೀರ ಕಂಡಲ್ಲಿ ......................................

..................................................................

..................................................................

....................................ಕೂಡಲಸಂಗಮದೇವ

**ಅಥವಾ**

ಮರವಿದ್ದು ಫಲವೇನು.................................

........................................................................

........................................................................

.............................................ಚೆನ್ನಮಲ್ಲಿಕರ್ಜುನ

**X ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (1X4=4)**

35 ಗುರಿ ಪದ್ಯದ ಸಾರಾಂಶ ಬರೆಯಿರಿ

**ಅಥವಾ**

ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕಗೊಳ್ಳುತ್ತದೆ?

**XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (2 X2=4)**

36 ಇಂದಿನ ಮಕ್ಕಳು ಅಗಾಧ ಪ್ರತಿಭೆ ಹೊಂದಿದ್ದು ಕ್ರಿಯಾಶೀಲತೆಯಿಂದ ಕೂಡಿದ್ದಾರೆ.ಆಧುನಿಕ ಸೌಲಭ್ಯಗಳು ಇವರನ್ನು ಬೇಗ ಆಕರ್ಷಿಸಬಲ್ಲವು. ಅದರಲ್ಲೂ ಆಧುನಿಕ ಸಮೂಹ ಮಾಧ್ಯಮವಾದ ಅಂತರ್ಜಾಲವು ವಿದಾರ್ಥಿಗಳಿಗೆ ಅಪಾಯಮಾನವಾಗಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ತಾನು ಕಲಿಯಬೇಕಿರುವ ವಿಷಯಗಳಲ್ಲಿ ಹೆಚ್ಚಿನ ಮಾಹಿತಿ ಅರಿಯಲು ಗ್ರಂಥಾಲಯಗಳಲ್ಲಿ ದಿನಗಟ್ಟಲೇ ಹುಡುಕಬೇಕಾದ ಅಗತ್ಯವಿಲ್ಲಾ.ತನಗೆ ಬೇಕಾದ ಮಾಹಿತಿಯನ್ನು ಕ್ಷಣ ಮಾತ್ರದಲ್ಲಿ ಒದಗಿಸುವ ಕಾರ್ಯವನ್ನು ಈ ಅಂತರ್ಜಾಲಗಳು ಮಾಡುತ್ತವೆ.ಅಲ್ಲದೇ ಅನೇಕ ಟಿವ್ಹಿ ಚಾನಲ್‌ಗಳು ಮನರಂಜನೆಯ ಜೊತೆಗೆ ಇತಿಹಾಸ ಪ್ರಾಕೃತಿಕ ಅಂಶಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡುತ್ತವೆ.ಇಂತಹ ಕಾರ್ಯಕ್ರಮಗಳ ವೀಕ್ಷಣೆಯಿಂದ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಉತ್ಸಾಹ ಹಾಗೂ ವಿಷಯದ ಬಗ್ಗೆ ಕುತೂಹಲ ಬೆಳೆಸಲು ಸಹಕಾರಿಯಾಗುತ್ತದೆ.ಹೀಗಾಗಿ ವಿದ್ಯಾರ್ಥಿ ತನಗೆ ಆಸಕ್ತಿ ಇರುವ

SHARANUSH

ವಿಷಯಗಳನ್ನು ಯಾರ ನೆರವಿಲ್ಲದೆ ಸಮೂಹ ಮಾಧ್ಯಮಗಳ ಮೂಲಕ ಕಲಿಯಲು ಸಾಧ್ಯವಿದೆ.ಕೊರೊನಾ ಸಂಕಷ್ಟ ಕಾಲದಲ್ಲಿ ನಾವು ಅಂತರ್ಜಾಲ ಮಾಧ್ಯಮದ ಮೂಲಕ ಮಕ್ಕಳಿಗೆ ಶಿಕ್ಷಣ ಒದಗಿಸುವ ಪ್ರಯತ್ನ ಮಾಡುತ್ತಿದ್ದೇವೆ.ಆದರೆ ಅಂತರ್ಜಾಲವು ನಮ್ಮ ಶಾಲಾ ವ್ಯವಸ್ಥೆಗೆ ಪೂರಕವೇ ಹೊರತು ಎಂದಿಗೂ ಪರ್ಯಾಯವಾಗಲಾರದು. ಏಕೆಂದರೆ ಶಾಲೆಯು ಒಂದು ಸಮುದಾಯದ ಅನುಭವವನ್ನು ಕಟ್ಟಿಕೊಡುತ್ತದೆ.ಆದರೆ ಅಂತರ್ಜಾಲದಲ್ಲಿ ನಾವು ಜ್ಞಾನ ಹೆಚ್ಚಿಸಿಕೊಳ್ಳಲು ಮಾಹಿತಿಯನ್ನಷ್ಟೇ ನೀಡಲು ಸಾಧ್ಯ.ಸಮೂಹ ಮಾಧ್ಯಮಗಳ ಮೂಲಕ ನಾವು ಮಕ್ಕಳ ಗಮನವನ್ನು ಕಲಿಕೆಯ ಕಡೆ ಹಿಡಿದಿಡುವ ಪ್ರಯತ್ನ ಮಾಡಬಹುದೇ ಹೊರತು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಎಂದಿಗೂ ಸಾಧ್ಯವಾಗುವುದಿಲ್ಲ.

**ಪ್ರಶ್ನೆಗಳು**

ಅ) ಸಮೂಹ ಮಾಧ್ಯಮಗಳು ಮಕ್ಕಳ ಕಲಿಕೆಗೆ ಹೇಗೆ ನೆರವಾಗುತ್ತವೆ?

ಆ) ಸಮೂಹ ಮಾಧ್ಯಮಗಳಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆ ಏಕೆ ಸಾಧ್ಯವಿಲ್ಲ?

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ. (1X4=4)**

37 ನನ್ನ ಜೀವನದ ಗುರಿ

**ಅಥವಾ**

ವರದಕ್ಷಿಣೆಯು ಒಂದು ಸಾಮಾಜಿಕ ಪಿಡುಗು

**XIII ಈ ಕೆಳಗಿನ ಯವೂದಾದರೂ ಒಂದು ಪತ್ರವನ್ನು ಬರೆಯಿರಿ (1X5=5)**

38 ನಿಮ್ಮನ್ನು ಚಿತ್ರದುರ್ಗದ ಗಾಂಧೀನಗರದಲ್ಲಿ ವಾಸಿಸುತ್ತಿರುವ ರಮೀಜಾ/ಅಬ್ದುಲ್ ಎಂದು ಭಾವಿಸಿಕೊಂಡು ಬೆಂಗಳೂರಿನ ಚೈತನ್ಯ ನಗರದಲ್ಲಿ ವಾಸಿಸುತ್ತಿರುವ ನಿಮ್ಮ ತಂದೆಗೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಲು 1000 ರೂಪಾಯಿಗಳನ್ನು ಕಳುಹಿಸಿಕೊಡುವಂತೆ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ಧಾರವಾಡದ ಲಕ್ಷ್ಮೀನಗರದಲ್ಲಿ ವಾಸಿಸುತ್ತಿರುವ ಫಾತೀಮಾ/ಅಬ್ದುಲ್ ಎಂದು ಭಾವಿಸಿಕೊಂಡು ನಿಮ್ಮ ಕಾಲೋನಿಗೆ ಗ್ರಂಥಾಲಯ ಸ್ಥಾಪಿಸುವಂತೆ ಜಿಲ್ಲಾಧಿಕಾರಿಗಳಿಗೊಂದು ಮನವಿ ಪತ್ರ ಬರೆಯಿರಿ

***********

SHARANUSH